

ಸಂಕೀರ್ಣತೆಯೇ ಹವಾಮಾನ ಮುನ್ಸೂಚನೆಯ ಲೆಕ್ಕಾಚಾರಗಳನ್ನು ಜಟಿಲಗೊಳಿಸುತ್ತಿದೆ. ಆದರೆ, ಅತ್ಯಾಧುನಿಕ ತಂತ್ರಜ್ಞಾನದ ನೆರವಿನಿಂದಾಗಿ ಇತ್ತೀಚಿನ ವರ್ಷಗಳಲ್ಲಿ 'ಐಎಂಡಿ'ಯ ಬಹುತೇಕ ಲೆಕ್ಕಾಚಾರಗಳು ವಾಸ್ತವಕ್ಕೆ ಹತ್ತಿರವಾಗಿದೆ. ಆ ಕಾರಣದಿಂದಾಗಿಯೇ ಜನಸಾಮಾನ್ಯರು ಹವಾಮಾನ ಇಲಾಖೆಯ ಮುನ್ಸೂಚನೆಯನ್ನು ಕುತೂಹಲದಿಂದ ಗಮನಿಸುವಂತಾಗಿದೆ.

## ಐಎಂಡಿ: ನಡೆದು ಬಂದ ದಾರಿ

ಒಂದೂವರೆ ಶತಮಾನಗಳ ಅವಧಿಯಲ್ಲಿ 'ಭಾರತೀಯ ಹವಾಮಾನ ಇಲಾಖೆ' ನಡೆದುಬಂದ ಹಾದಿ ಕುತೂಹಲಕರವಾದುದು. ಆ ಹಾದಿಯ ಪಕ್ಷಿನೋಟವನ್ನು ಕೆಳಗಿನಂತೆ ಗುರ್ತಿಸಬಹುದು:

### 1875-1890

ಭಾರತೀಯ ಹವಾಮಾನ ಸಂಸ್ಥೆಯ ಸ್ಥಾಪನೆಯ ನಂತರ ದೇಶದ ವಿವಿಧೆಡೆಗಳಲ್ಲಿದ್ದ ಹವಾಮಾನ ವೀಕ್ಷಣಾಲಯಗಳನ್ನು ಒಟ್ಟುಗೂಡಿಸಿದ ಒಂದು ಜಾಲವನ್ನು ರೂಪಿಸಲಾಯಿತು. ವೀಕ್ಷಣಾಲಯಗಳನ್ನು ಏಕರೂಪ ಮಾನದಂಡದ ಪ್ರಕಾರ ಸದೃಢಗೊಳಿಸಲಾಯಿತು. ಭಾರತದಾದ್ಯಂತ ಇರುವ ವೀಕ್ಷಣಾಲಯಗಳಲ್ಲಿ ಲಭ್ಯ ಮಾಹಿತಿಯನ್ನು ಪರಸ್ಪರ ಹಂಚಿಕೊಳ್ಳುವ ಪ್ರಕ್ರಿಯೆ ಆರಂಭವಾಯಿತು. ವಿದೇಶಗಳ ಜೊತೆಗೂ ಈ ಮಾಹಿತಿಯನ್ನು ಹಂಚಿಕೊಳ್ಳಲಾಗುತ್ತಿತ್ತು. ಐಎಂಡಿಯು ವಿಶ್ವ ಹವಾಮಾನ ಸಂಸ್ಥೆಯ ಸದಸ್ಯತ್ವ ಪಡೆಯಿತು.

### 1891-1946

ಮೊದಲನೇ ಮತ್ತು ಎರಡನೇ ಮಹಾಯುದ್ಧದ ಕಾಲದಲ್ಲಿ ಹವಾಮಾನ ಮುನ್ಸೂಚನೆಗಳ ಅಗತ್ಯವು ಹೆಚ್ಚಾಗಿತ್ತು. ವಿಮಾನ ಯಾನಕ್ಕೆ ಪೂರಕವಾದ ಮಾಹಿತಿಗಳನ್ನು ಬಿತ್ತರಿಸುವ ಕೆಲಸ ಆರಂಭವಾಯಿತು. 1908ರಲ್ಲಿ ಭಾರತೀಯ ಸಮುದ್ರದ ಮೊದಲ ಹವಾಮಾನ ಅಟ್ಲಾಸ್ ಪ್ರಕಟವಾಯಿತು. ಹವಾಮಾನದ ಸುದ್ದಿಯನ್ನು ಬಿತ್ತರಿಸಲು ರೇಡಿಯೊ ಬಳಕೆ ಆರಂಭವಾಯಿತು. 1936ರಲ್ಲಿ ಆಕಾಶವಾಣಿಯು ಹವಾಮಾನ ಸುದ್ದಿಯನ್ನು ಪ್ರಕಟಿಸಲಾರಂಭಿಸಿತು. ಕೃಷಿಗೆ ಸಂಬಂಧಿಸಿದ ಮುನ್ಸೂಚನೆ ನೀಡಲು ಪೂರಕವಾದ ಅಧ್ಯಯನಕ್ಕಾಗಿ ಪ್ರತ್ಯೇಕ ವಿಭಾಗ ಆರಂಭಿಸಲಾಯಿತು.

### 1947-1959

ಇದು ರೇಡಾರ್ ಬಳಕೆಯ ಆರಂಭಿಕ ಕಾಲ. ಭಾರತಕ್ಕೆ ಸ್ವಾತಂತ್ರ್ಯ ದೊರೆತ ಸಂದರ್ಭದಲ್ಲಿ ಭಾರತೀಯ ವಾಯುಯಾನ ವಿಭಾಗದಲ್ಲಿ ಹವಾಮಾನ ಮುನ್ಸೂಚನೆಗೆ ಸಂಬಂಧಿಸಿದ ಮಾಹಿತಿಯ ತುರ್ತು ಹೆಚ್ಚಾಯಿತು. 1954ರಲ್ಲಿ ರೇಡಾರ್‌ನ ಬಳಕೆಯು ಇದಕ್ಕೆ ಪೂರಕವಾಗಿ ಒದಗಿ ಬಂತು. ಮೊದಲ ರೇಡಾರ್ ವ್ಯವಸ್ಥೆಯನ್ನು ಡಂಡಂನಲ್ಲಿ ಸ್ಥಾಪಿಸಲಾಯಿತು. ಪ್ರವಾಹ ಮತ್ತು ಅಣೆಕಟ್ಟುಗಳ ನಿರ್ವಹಣೆಗೆ 'ಐಎಂಡಿ'ಯ ಮಾಹಿತಿಯನ್ನು ಬಳಕೆ ಶುರುವಾಯಿತು. ಇದಕ್ಕೆ ಪೂರಕವಾಗಿ 1949ರಲ್ಲಿ 'ದಾಮೋದರ್ ವ್ಯಾಲಿ ಕಾರ್ಪೊರೇಷನ್ ಹವಾಮಾನ ಘಟಕ' ಕಾರ್ಯಾರಂಭ ಮಾಡಿತು. 1955ರಲ್ಲಿ



ಮಳೆ ಚೌಕಟ್ಟಿನಲ್ಲಿ ದೆಹಲಿ ವಿಮಾನ ನಿಲ್ದಾಣದಲ್ಲಿರುವ ಹವಾಮಾನ ಕೇಂದ್ರ